ಬಟ್ಟೆ ಒಣಗಿಸುವುದಕ್ಕೆ ಸೀಮಿತವಾಗಿತ್ತು. ಬೆಡ್‌ರೂಮಿನ ಕಿಟಕಿ ವಿಕಾರವಾಗಿ ಹೊರಗೆ ಚಾಚಿದ್ದು ಅದರ ಜಾಲರಿಗಳಲ್ಲಿ ಹಿಂದಿನ ಬಾಡಿಗೆದಾರರು ಎಸೆದಿದ್ದ ಅನೇಕ ಪ್ಲಾಸ್ಟಿಕ್ ವಸ್ತುಗಳು ಸಿಕ್ಕಿಕೊಂಡು ತೇಲಾಡುತ್ತಿದ್ದವು. ಈ ಊರಲ್ಲಿ ದುಡ್ಡಿಗೆ ಬೆಲೆಯೇ ಇಲ್ಲ ಎಂಬಂತಹ ಸವಕಲು ಮಾತುಗಳನ್ನಾಡುತ್ತಾ ಇಪ್ಪತ್ತೇಳು ವರ್ಷದ ಅವಿವಾಹಿತ ಯುವಕನೊಬ್ಬ ಮೂರು ವರ್ಷಗಳ ಮಟ್ಟಿಗೆ ಈ ಪುಟ್ಟ ಗೂಡನ್ನು ಸೇರಿಕೊಂಡದ್ದು ಅವನ ನೆರೆಹೊರೆಯವರಲ್ಲಿ, ಸೊಸೈಟಿಯ ವಾಚ್‌ಮನ್ನಿನಲ್ಲಿ, ಕುರ್ಲಾದ ಬೀದಿಬೀದಿಯ ತಿರುವುಗಳಲ್ಲಿ ಒಂದಿನಿತೂ ಆಸಕ್ತಿ, ಕುತೂಹಲ ಮೂಡಿಸಿರಲಿಲ್ಲ.

ಈಗ ಲಾಕ್‌ಡೌನ್ ದೆಸೆಯಿಂದ ರಾಜೇಶನಿಗೆ ಈ ಫ್ಲ್ಯಾಟನ್ನು ತನ್ನ ಮನೆಯನ್ನಾಗಿಸುವ ಶ್ರಮ ಮತ್ತು ಬಿಡುವಿಲ್ಲದ ಬ್ಯಾಂಕ್ ಕೆಲಸದಿಂದ ಸ್ವಲ್ಪ ವಿರಾಮವೇನೋ ದೊರಕಿತು. ಬ್ಯಾಂಕ್ ನಡೆಯಲೇಬೇಕಾದ್ದರಿಂದ ಊರಿಗೆ ಹೋಗಿಬಿಡುವುದಕ್ಕೆ ನಿರ್ಬಂಧವಿತ್ತು. ಅಡಿಗೆಯವರಿಗೆ ಮತ್ತು ಮನೆಗೆಲಸದವರಿಗೆ ಸೊಸೈಟಿಯಲ್ಲಿ ಅನುಮತಿಯಿರಲಿಲ್ಲ. ಹೀಗಾಗಿ ತಾನೇ ಅಡಿಗೆ ಮಾಡಿಕೊಂಡು ಮನೆ ಸ್ವಚ್ಛ ಮಾಡಿಕೊಳ್ಳುವ ಹೊಸ ಜೀವನಶೈಲಿಗೆ ರಾಜೇಶ ಅನುವಾಗತೊಡಗಿದ. ವಾರಕ್ಕೆ ನಾಲ್ಕು ದಿನ ಮನೆಯಲ್ಲಿಯೇ ಇರುವುದರಿಂದ ಕೋನಕೋನವನ್ನೂ ನೋಡುವ ಹೊಸಕಣ್ಣು ಬಂದಂತಾಗಿತ್ತು. ಇದರಿಂದಲೇ ಒಂದು ಮಧ್ಯಾಹ್ನ ಅಡಿಗೆಮನೆಯ ಶೆಲ್ಫಿನಲ್ಲಿ ಹಲ್ಲಿಯ ಹಿಕ್ಕೆ ಕಂಡಂತಾಗಿದ್ದು! ಆ ಕಪ್ಪು ಬಿಳುಪಿನ ಸಣ್ಣ ಕಸವನ್ನು ಕಾಣುತ್ತಲೇ ರಾಜೇಶ ಬೆಚ್ಚಿಬಿದ್ದ. ತನ್ನ ಸುತ್ತ ಯಾವುದೋ ಮೂಲೆಯಲ್ಲಿ ಹಲ್ಲಿಯೊಂದು ಹಾಜರಿರಬಹುದು ಎನ್ನುವ ಸಂಗತಿ ಅವನಿಗೆ ಜೀರ್ಣವಾಗದ ಹಿಂಸೆಯಾಯಿತು.

